ಪ್ರಧಾನ_ಸಿವಿಲ್_ನ್ಯಾಯಾಧೀಶರು_ಮತ್ತು_ಜೆ_ಎಂ_ಎಫ್_ಸಿ_ನ್ಯಾಯಾಲಯ, ವಿರಾಜಪೇಟೆ

**ಉಪಸ್ಥಿತರುಃ ಸಂತೋಷ ಕೊಠಾರಿ,**
**ಬಿ.ಎ.ಎಲ್., ಎಲ್.ಎಲ್.ಬಿ.,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು** ಜೆ ಎಂ ಎಫ್ ಸಿ ನ್ಯಾಯಾಲಯ**,** ವಿರಾಜಪೇಟೆ

# ಸಿ. ಸಿ. ನಂ. 1391/2022

ಪಿರ್ಯಾದಿಃ ಶ್ರೀ ಹೇಮಂತಕುಮಾರ ಎಂ.ಎನ್, ಗಂಡಃ ಎಂ ನಾರಾಯಣ ಶೆಟ್ಟಿ,43 ವರ್ಷ,
ವಾಸಃ ನ್ಯೂ ಎಕ್ಸ್ ಟೈ ಶನ್, ಎ.ಎಸ್ ರಸ್ತೆ , ವಿರಾಜಪೇಟೆ,
ದ.ಕೊಡಗು.

(ಶ್ರೀ ಬಿ.ಎನ್.ಜೆ, ವಕೀಲರು)

***ವಿರುದ್ಧ***

ಆರೋಪಿಃ ಶ್ರೀ ಮದಕರಿ ನಾಯಕ ಕೆ, ತಂದೇಃಕೃಷ್ಣ ಪಿ.ಎಸ್,35 ವರ್ಷ,
ಗುತ್ತಿಗೆದಾರ, ನಂ.2502,3 ನೇ ಮುಖ್ಯ, 6 ನೇ ಕ್ರಾಸ್, ಜಯಲಕ್ಷ್ಮಿಪುರಂ,
ವಿನಾಯಕ ನಗರ,ಮೈಸೂರು -570 012.
(ಶ್ರೀ ಎ.ಜೆ.ಎಸ್, ವಕೀಲರು)

## ::ಆಪಾದನೆಯ_ಸಾರಾಂಶ::

ಆರೋಪಿಯಾದ ನೀವು ಹಾಗೂ ಪಿರ್ಯಾದಿದಾರರು ಹಲವು ವರ್ಷಗವಿಂದ ಪರಿಚಯಸ್ತರಾಗಿದ್ದು, ಆರೋಪಿಯಾದ ನೀವು ರೂ.2,60,000/-ಹಣವನ್ನು ಪಿರ್ಯಾದಿಯವರಿಂದ ಗುತ್ತಿಗೆ ಕೆಲಸಕ್ಕಾಗಿ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲವನ್ನು ತೀರಿಸುವ ಸಲುವಾಗಿ ಆರೋಪಿಯಾದ ನೀವು ನಿಮ್ಮ ಅಕ್ಸಿಸ್ ಬ್ಯಾಂಕ್ ಖಾತೆಗೆ ಸಂಬಂಧಿಸಿದ ಚೆಕ್ ಸಂಖ್ಯೆ 165015 ದಿನಾಂಕ 15.02.2022 ರಂದು ರೂ.2,60,000/- ವನ್ನು ನಮೂದಿಸಿ ಇಂಡಿಯನ್ ಬ್ಯಾಂಕ್,ವಿರಾಜಪೇಟೆ ಶಾಖೆಯ, ಚೆಕ್ಕನ್ನು ನೀಡಿದ್ದು, ಚೆಕ್ಕನ್ನು ಪಿರ್ಯಾದಿಯವರು ನಗದೀಕರಿಸುವ ಸಲುವಾಗಿ ಇಂಡಿಯನ್ ಬ್ಯಾಂಕ್, ವಿರಾಜಪೇಟೆ ಶಾಖೆ, ಮೂಲಕ ಸಲ್ಲಿಸಿದಾಗ, ಸದರಿ ಚೆಕ್‌ಗಳು "**Funds Insufficient**" ಎಂಬ ಕಾರಣ ನಮೂದಿಸಿ ದಿನಾಂಕಃ 10.05.2022 ರಂದು ಬ್ಯಾಂಕ್ ಹಿಂಬರಹದೊಂದಿಗೆ ಅಮಾನ್ಯಗೊಂಡ ಚೆಕ್ ಹಿಂದಿರುಗಿಸಿರುತ್ತಾರೆ. ಚೆಕ್

ನಗದಾಗದೇ ಮರಳಿ ಬಂದ ನಂತರ ಪಿರ್ಯಾದಿ ನಿಮಗೆ ನೋಂದಾಯಿತ ಅಂಚೆಯ ಮೂಲಕ ತಮ್ಮ ವಕೀಲರಿಂದ ದಿನಾಂಕಃ 31.05.2022 ರಂದು ನೋಟೀಸ್ ಕಳುಹಿಸಿ ಚೆಕ್‌ನ ಹಣವನ್ನು ತಮಗೆ ಪಾವತಿಸಬೇಕೆಂದು ತಗಾದೆ ಮಾಡಿರುತ್ತಾರೆ. ಸದರಿ ನೋಟಿಸ್ ನಿಮಗೆ ಜಾರಿಯಾಗಿದ್ದರೂ ಸಹ ನೀವು ಚೆಕ್‌ನ ಮೊತ್ತವನ್ನು ಪಿರ್ಯಾದಿ ಬ್ಯಾಂಕಿಗೆ ಪಾವತಿಸಿರುವುದಿಲ್ಲ ಆ ಮೂಲಕ ನೀವು ವರ್ಗಾವಣೀಯ ಲಿಖಿತಗಳ ಕಾಯಿದೆ 1881 ರ ವಿಧಿ 138 ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದಾಗಿ ನಿಮ್ಮ ವಿರುದ್ಧ ಆಪಾದನೆ ಇದೆ.

ಪ್ರಶ್ನೆಃ 1. ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶ ಅರ್ಥವಾಯಿತೆ?

ಉತ್ತರಃ

ಪ್ರಶ್ನೆಃ 2. ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶವನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಮೇಲಿನ ಆಪಾದನೆಯ ಸಾರಾಂಶವನ್ನು ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಡೀಕರಿಸುತ್ತೇನೆ.)

ಸಹಿಃ

(ಸಂತೋಷ ಕೊಠಾರಿ )

ದಿನಾಂಕಃ 15.02.2023

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ,
ವಿರಾಜಪೇಟೆ.